**3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ**

| | |
|---|---|
| ಸಾಕ್ಷಿದಾರರ ಹೆಸರು | **ಶಂಕರ್** |
| ತಂದೆಯ ಹೆಸರು | **ರಂಗಾಬೋವಿ** |
| ವಯಸ್ಸು | **37 ವರ್ಷ** |
| ವೃತ್ತಿ | **ಚಾಲಕ** |
| ವಾಸಸ್ಥಳ | **ವಡ್ಡರಹಟ್ಟಿ ಗ್ರಾಮ** |
| ಪ್ರಮಾಣ ವಚನ ಬೋಧಿಸಿದ ದಿನಾಂಕಃ | **25.07.2025** |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1) ಚಾಸಾ–1 ರಿಂದ 4 ಮತ್ತು 6 ರವರು ನನಗೆ ಪರಿಚಯವಿರುತ್ತಾರೆ. ನನಗೆ ಆರೋಪಿಗಳ ಪರಿಚಯವಿದೆ. ದಿಃ 26.05.2019ರಂದು ಮದ್ಯಾಹ್ನ 3 ರಿಂದ 3–30ರ ಸಮಯದಲ್ಲಿ ನಾನು ಚಾಸಾ–2ರವರ ಮನೆಯಲ್ಲಿದ್ದಾಗ ಆರೋಪಿಗಳು, ಚಾಸಾ–1 ಮತ್ತು 2 ರವರು ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆ ಮಾಡುತ್ತಿದ್ದರು. ನಾನು ಹೋಗುವಷ್ಟರಲ್ಲಿ ಗಲಾಟೆ ಜಾಸ್ತಿಯಾಗಿದ್ದು ಚಾಸಾ–4, 6 ಮತ್ತು ನಾನು ಸೇರಿ ಜಗಳ ಬಿಡಿಸಿರುತ್ತೇವೆ.

2) ಚಾಸಾ–2ರವರಿಗೆ 1ನೇ ಆರೋಪಿಯು ದೊಣ್ಣೆಯಿಂದ ತಲೆಗೆ ಹೊಡೆದ ಪರಿಣಾಮ ಚಾಸಾ–2ರವರು ಸ್ಥಳದಲ್ಲೇ ಪ್ರಜ್ಞೆ ತಪ್ಪಿದ್ದರಿಂದ 1ನೇ ಆರೋಪಿಯು ಸ್ಥಳದಿಂದ ಹೊರಟು ಹೋದರು. ನಂತರ ಚಾಸಾ–1 ಮತ್ತು 2 ರವರನ್ನು ಹಿರಿಸಾವೆ ಆಸ್ಪತ್ರೆಗೆ ಆಂಬುಲೆನ್ಸ್ ನಲ್ಲಿ ಕಳುಹಿಸಿರುತ್ತೇವೆ.

3) ಗಲಾಟೆಯಾದ ಮರುದಿನ ಪೊಲೀಸರು ಬೆಳಿಗ್ಗೆ 11–30 ಸಮಯದಲ್ಲಿ ಗಲಾಟೆಯ ಬಗ್ಗೆ ವಿಚಾರಿಸಲು ನನ್ನ ಹುಡುಕಿಕೊಂಡು ಬಂದಿದ್ದರು. ಗಲಾಟೆಯಾದ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ. ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿ 3 ದೊಣ್ಣೆಗಳನ್ನು ಅಮಾನತ್ತುಪಡಿಸಿಕೊಂಡು ಮಹಜರ್ ಗೆ ಚಾಸಾ–4, 6 ಮತ್ತು ನಾನು ಸಹಿ ಮಾಡಿರುತ್ತೇವೆ. ಸದರಿ ಮಹಜರನ್ನು ಬೆಳಿಗ್ಗೆ 11 ರಿಂದ 11–30ರವರೆಗೆ ಬರೆದಿರುತ್ತಾರೆ.

4) ಸಾಕ್ಷಿಗೆ ನಿ.ಪಿ.2 ಅನ್ನು ತೋರಿಅಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ 3 ದೊಣ್ಣೆಗಳನ್ನು ನೋಡಿ ಆ ದಿನ ಪೊಲೀಸರು ಅಮಾನತ್ತುಪಡಿಸಿಕೊಂಡ ದೊಣ್ಣೆಗಳಾಗಿರುತ್ತವೆ ನೋಡಿ ಗುರುತಿಸಿರುತ್ತಾರೆ. ಸದರಿ ದೊಣ್ಣೆಗಳನ್ನು

ಈಗಾಗಲೆ ಮು.ಮಾ–1 ರಿಂದ 3 ಎಂದು ಗುರುತಿಸಲ್ಪಟ್ಟಿರುತ್ತದೆ. ಘಟನೆಯ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ವಾದ ಆಲಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

4) ಆರೋಪಿಗಳು ಅವಾಚ್ಯ ಶಬ್ಧಗಳಿಂದ ಚಾಸಾ–1 ಮತ್ತು 2 ರವರಿಗೆ ಬೈದಿದ್ದಾರೆ ಎಂದು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಆರೋಪಿತರು ಚಾಸಾ–1 ಮತ್ತು 2 ಇಬ್ಬರಿಗೂ ಕೈಗಳಿಂದ ಮತ್ತು ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಚಾಸಾ–3ರವರಿಗೆ 2ನೇ ಆರೋಪಿಯು ಕೈಗಳಿಂದ ಹೊಡೆದರು ಎಂದರೆ ಸರಿ. ಆರೋಪಿಗಳೆಲ್ಲರೂ ಚಾಸಾ–1 ರಂದ 3ರವರಿಗೆ ಜಮೀನಿನ ವಿಚಾರಕ್ಕೆ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದು ಪೊಲೀಸರಿಗೆ ಹೇಳಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ